# ವಿದ್ಯುನ್ಮಾನ ಆಡಳಿತದಲ್ಲಿ ನಾಗರಿಕ ಸಮಾಜದ ಹೊಣೆಗಾರಿಕೆ

**ಸುನೀಲ ಹತ್ತಿ[1] & ನಾಗರಾಜು ಎನ್.[2]**

[1]ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ

[2]ಸಂಶೋಧನಾ ಮಾರ್ಗದರ್ಶಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

**DOI: https://doi.org/10.5281/zenodo.18848719**

## ABSTRACT:

ವಿದ್ಯುನ್ಮಾನ ಆಡಳಿತವು ಸಾರ್ವಜನಿಕ ಸೇವೆಗಳ ವಿತರಣೆಯಲ್ಲಿ ಪಾರದರ್ಶಕತೆ, ಕ್ಷಿಪ್ರತೆ ಮತ್ತು ಕಾರ್ಯದಕ್ಷತೆಯನ್ನು ಹೆಚ್ಚಿಸುವ ಮಹತ್ವದ ಸಾಧನವಾಗಿದೆ. ವಿದ್ಯುನ್ಮಾನ ಆಡಳಿತದ ಮೂಲಕ ಆಡಳಿತದಲ್ಲಾದ ಬೆಳವಣಿಗೆಯ ಜೊತೆಗೆ ಮಾಹಿತಿ ಸೋರಿಕೆ, ದುರ್ಬಳಕೆ ಮತ್ತು ತಂತ್ರಜ್ಞಾನದ ಮೇಲಿನ ಅವಲಂಬನೆಯು ಮಾನವ ಸಂಪನ್ಮೂಲ ಕೌಶಲ್ಯವನ್ನು ಕಡಿಮೆ ಮಾಡುವ ಸಾಧ್ಯತೆಯೂ ವಿದ್ಯುನ್ಮಾನ ಆಡಳಿತಕ್ಕಿದೆ, ಆದುದರಿಂದ ವಿದ್ಯುನ್ಮಾನ ಆಡಳಿತದ ನೀತಿಗಳು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಅನುಗುಣವಾಗಿರಲು ನಾಗರಿಕ ಸಮಾಜದ ಜಾಗೃತಿಯಿಂದ ಕೂಡಿದ ಜವಾಬ್ದಾರಿಯು ಪ್ರಮುಖವಾಗಿದೆ. ವಿದ್ಯುನ್ಮಾನ ಆಡಳಿತದ ಉತ್ತೇಜನಕ್ಕೆ ಸರಕಾರ ಮತ್ತು ಪ್ರಜೆಗಳ ಸಹಕಾರ, ಜವಾಬ್ದಾರಿತ್ವ, ಉಪಯೋಗಿಸುವಿಕೆ ಮತ್ತು ವಿಮರ್ಶೆಯ ಅಗತ್ಯವನ್ನು ವಿವರಿಸುವುದರ ಜೊತೆಗೆ, ಈ ಲೇಖನವು ವಿದ್ಯುನ್ಮಾನ ಆಡಳಿತ ಮತ್ತು ನಾಗರಿಕ ಸಮಾಜದ ಹೊಣೆಗಾರಿಕೆ ಪಾತ್ರವನ್ನು ವಿಶ್ಲೇಷಿಸುತ್ತದೆ. ವಿದ್ಯುನ್ಮಾನ ಆಡಳಿತದ ಸೇವೆಗಳು ಲಕ್ಷಾಂತರ ಜನರಿಗೆ ನಿರ್ವಹಣಾ ಸುಲಭತೆ ಉಂಟು ಮಾಡಿದರೂ, ಅದರೊಂದಿಗೆ ಹಲವು ಆರ್ಥಿಕ, ಸಾಮಾಜಿಕ ಮತ್ತು ನೀತಿತಾತ್ತ್ವಿಕ ಸವಾಲುಗಳೂ ಹುಟ್ಟಿಕೊಂಡಿವೆ. ವಿದ್ಯುನ್ಮಾನ ಆಡಳಿತಾಧಿಕಾರದ ದುರುಪಯೋಗದಿಂದ ನಾಗರಿಕ ಹಕ್ಕುಗಳಿಗೆ ಉಂಟಾಗಬಹುದಾದ ಅಪಾಯಗಳನ್ನು ತಡೆಗಟ್ಟಲು ನಾಗರಿಕ ಸಮಾಜವು ಹೇಗೆ ಪಾರದರ್ಶಕತೆ, ಜವಾಬ್ದಾರಿ ಮತ್ತು ಸಮಾನ ಹಕ್ಕುಗಳನ್ನು ಕಾಯ್ದಿರಿಸಲು ಹೊಣೆಗಾರಿಕೆಯಿಂದ ಕೆಲಸ ಮಾಡುತ್ತದೆ ಎಂಬುದನ್ನು ಈ ಪ್ರಬಂಧವು ವಿವರಿಸುತ್ತದೆ.

## KEYWORDS:

ವಿದ್ಯುನ್ಮಾನ ಆಡಳಿತ, ನಾಗರಿಕ ಸಮಾಜ, ಸರಕಾರ, ಹೊಣೆಗಾರಿಕೆ, ಪಾರದರ್ಶಕತೆ, ನೀತಿಗಳು, ದತ್ತಾಂಶ, ಗೌಪ್ಯತೆ, ಮಾಹಿತಿ ಹಕ್ಕುಗಳು.

## ಪರಿಚಯ:

ಈಗಿನ ಯುಗವನ್ನು “ವಿದ್ಯುನ್ಮಾನ ಯುಗ” ಎಂದು ಕರೆಯಲಾಗುತ್ತದೆ, ಏಕೆಂದರೆ, ಜನರು ಪ್ರತಿದಿನವೂ ತಮ್ಮ ದೈನಂದಿನ ಜೀವನದಲ್ಲಿ ಬೆಳಿಗ್ಗೆ ಸುದ್ದಿಪತ್ರಿಕೆಯನ್ನು ಓದುವುದರೊಂದಿಗೆ ಆರಂಭಿಸಿ ರಾತ್ರಿಯ ಶುಭಾಶಯಗಳವರೆಗೆ, ಚಿಕ್ಕ ಕಿರಾಣಿ ಅಂಗಡಿಯಿಂದ ಹಿಡಿದು ಬೃಹತ್ ಉದ್ಯಮಗಳ ವ್ಯವಹಾರಗಳೆಲ್ಲವೂ, ಎಲ್ಲ ರೀತಿಯ ಕ್ಷೇತ್ರಗಳಲ್ಲಿಯೂ ಮತ್ತು ಸರಕಾರದ ಹೆಚ್ಚಿನ ಆಡಳಿತ ಕಾರ್ಯಗಳು ಅಂತರ್ಜಾಲದ ಮೂಲಕ ನಡೆಯುತ್ತಿವೆ. ಇಂತಹ ವಿದ್ಯುನ್ಮಾನ ಯುಗದಲ್ಲಿ ಎಲ್ಲರ ಬದುಕಿನ ವಾಸ್ತವಗಳ ಪ್ರತಿಫಲನದ ವೇದಿಕೆಯಾಗಿದೆಯಲ್ಲದೆ ಅವರ ಜೀವನದ ಕೆಲವು ವೈಯಕ್ತಿಕ ಮಾಹಿತಿಗಳ ಸೋರಿಕೆಯೂ ಆಗುತ್ತಿದೆ. ಅದೇ ರೀತಿ ಸರಕಾರಗಳು ಸಾರ್ವಜನಿಕ ಸೇವೆಗಳನ್ನು ತ್ವರಿತವಾಗಿ, ಕಡಿಮೆ ವೆಚ್ಚದಲ್ಲಿ ಮತ್ತು ಸುಗಮವಾಗಿ

ತಲುಪಿಸುವುದಕ್ಕೆ ತಂತ್ರಜ್ಞಾನವನ್ನು ಬಳಸುತ್ತಿದ್ದರೂ, ಭದ್ರತೆ, ಗೌಪ್ಯತೆ ಮತ್ತು ಸಮಾನ ಹಕ್ಕಿನಂತಹ ಸವಾಲುಗಳು ಎದುರಾಗಿವೆ. ವಿದ್ಯುನ್ಮಾನ ಆಡಳಿತದಲ್ಲಿ ನಾಗರಿಕ ಸಮಾಜವು ಹೊಣೆಗಾರಿಕೆ (ವೀಕ್ಷಕ) ಸಂಘಟನೆಯಾಗಿ ನಿಂತು, ಆಡಳಿತವು ನ್ಯಾಯಸಮ್ಮತವಾಗಿ, ಜನಪರವಾಗಿ ಮತ್ತು ನೈತಿಕವಾಗಿ ನಡೆಯುತ್ತಿರುವುದನ್ನು ಖಚಿತಪಡಿಸಿಕೊಳ್ಳುತ್ತದೆ. ವಿದ್ಯುನ್ಮಾನ ಆಡಳಿತದ ಮರೆಯಲ್ಲಿ ಜನರ ವೈಯಕ್ತಿಕ ಬದುಕಿಗೆ ಸಂಚಕಾರ ತಂದೊಡ್ಡದಂತೆ, ಮಾಹಿತಿಗಳು ದುರುಪಯೋಗವಾಗದಂತೆ ತಡೆಯುವ, ಪಾರದರ್ಶಕ ಆಡಳಿತದ ಭರವಸೆಯನ್ನು ಖಚಿತಪಡಿಸಿಕೊಳ್ಳುವ ಮತ್ತು ಎಲ್ಲಾ ಪ್ರಜೆಗಳಿಗೆ ಉತ್ತಮ ಆಡಳಿತ ನೀಡುವಂತಾಗಲು ನಾಗರಿಕ ಸಮಾಜವು ಆಡಳಿತದ ಕುರಿತು ನಿರ್ವಹಿಸಬೇಕಾದ ಹೊಣೆಗಾರಿಕೆಯನ್ನು ವಿವರಿಸುವ ಪ್ರಯತ್ನವಾಗಿದೆ.

**ಪರಿಕಲ್ಪನಾ ಚೌಕಟ್ಟು (Conceptual Framework)**

ವಿದ್ಯುನ್ಮಾನ ಆಡಳಿತವೆಂದರೆ, ಸರಕಾರವು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳನ್ನು(ICT) ಬಳಸಿ ತನ್ನ ಆಡಳಿತಾತ್ಮಕ ಕಾರ್ಯಗಳು, ಸಾರ್ವಜನಿಕ ಸೇವೆಗಳ ವಿತರಣೆ, ನೀತಿ ರಚನೆ ಮತ್ತು ನಾಗರಿಕರೊಂದಿಗೆ ಸಂವಹನ ನಡೆಸುವ ಸಮಗ್ರ ಪ್ರಕ್ರಿಯೆಯಾಗಿದೆ. ಇದು ಕೇವಲ ಆಡಳಿತದ ಸೇವೆಗಳ ವಿದ್ಯುನ್ಮಾನೀಕರಣಕ್ಕೆ ಮಾತ್ರ ಸೀಮಿತವಲ್ಲ, ಅದರ ಸ್ವರೂಪವನ್ನೇ ಬದಲಾಯಿಸುವ ಶಕ್ತಿಯನ್ನು ಹೊಂದಿದೆ. ಆಡಳಿತವನ್ನು ವಿದ್ಯುನ್ಮಾನೀಕರಣಗೊಳಿಸುವ ಪ್ರಕ್ರಿಯೆಯು 1987ರಲ್ಲಿ ಆರಂಭಗೊಂಡಿದ್ದು ಪ್ರಸ್ತುತ ಕಾಲದಲ್ಲಿ ಉತ್ತುಂಗದಲ್ಲಿದೆ. ವಿದ್ಯುನ್ಮಾನ ಆಡಳಿತದ ಅಡಿಯಲ್ಲಿ ಡಿಜಿಲಾಕರ್, ಉಮಂಗ್, ಮೊಬೈಲ್ ಸೇವಾದಂತಹ ಅಂತರ್ಜಾಲ ಪೋರ್ಟಲ್‌ಗಳು, ಮೊಬೈಲ್ ಅಪ್ಲಿಕೇಶನ್‌ಗಳು, ವಿದ್ಯುನ್ಮಾನ ಗುರುತು ವ್ಯವಸ್ಥೆಗಳು, ಮಾಹಿತಿ ಆಧಾರಿತ ನಿರ್ಧಾರ ಪ್ರಕ್ರಿಯೆಗಳು ಮತ್ತು ವಿದ್ಯುನ್ಮಾನ ಪಾವತಿ ವ್ಯವಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತವೆ. ವಿದ್ಯುನ್ಮಾನವು ಆಡಳಿತವನ್ನು ವೇಗವಾಗಿ, ಕಡಿಮೆ ವೆಚ್ಚದಲ್ಲಿ ಮತ್ತು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವಲ್ಲಿ ಸಹಾಯ ಮಾಡುತ್ತವೆ. ಆದರೆ, ವಿದ್ಯುನ್ಮಾನ ಆಡಳಿತವು ಆಡಳಿತಕ್ಕೆ ಹೊಸ ಆಯಾಮಗಳನ್ನು ನೀಡುವುದರೊಂದಿಗೆ ಮಾಹಿತಿ ನಿಯಂತ್ರಣ, ಪೂರ್ವನಿರ್ದೇಶಿತ ನಿರ್ಧಾರಗಳು ಮತ್ತು ನಿಗಾವ್ಯವಸ್ಥೆಗಳಂತಹ ಸಮಸ್ಯೆಗಳನ್ನೂ ಹುಟ್ಟುಹಾಕಿದೆ. ಆದ್ದರಿಂದ ವಿದ್ಯುನ್ಮಾನ ಆಡಳಿತವನ್ನು ಕೇವಲ ತಂತ್ರಜ್ಞಾನ ಪ್ರಗತಿಯ ದೃಷ್ಟಿಯಿಂದ ಮಾತ್ರವಲ್ಲ, ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳ ದೃಷ್ಟಿಯಿಂದಲೂ ವಿಶ್ಲೇಷಿಸುವ ಅಗತ್ಯವಿದೆ.

**ನಾಗರಿಕ ಸಮಾಜ ಮತ್ತು ಅದರ ಕಾರ್ಯ:**

ಭಾರತದಲ್ಲಿ ನಾಗರಿಕ ಸಮಾಜದ ಉದಯವನ್ನು ಸ್ವಾತಂತ್ರ್ಯ ಪೂರ್ವದ ಕಾಲದಿಂದಲೂ ನೋಡಬಹುದಾಗಿದೆ. ಸ್ವಾತಂತ್ರ್ಯ ಹೋರಾಟದ ಜೊತೆಗೆ ಸಾಮಾಜಿಕ ಸುಧಾರಣೆಯಲ್ಲಿ ಪ್ರಮುಖ ಪಾತ್ರವಹಿಸಿತ್ತು ಅಲ್ಲದೆ, ಭಾರತೀಯರಿಗೆ ಉತ್ತಮ ಆಡಳಿತ ನೀಡಬೇಕೆಂಬ ಬೇಡಿಕೆ ಮತ್ತು ಸ್ವರಾಜ್ಯದ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಿತ್ತು. ನಾಗರಿಕ ಸಮಾಜವೆಂದರೆ, ಸರಕಾರ ಮತ್ತು ಮಾರುಕಟ್ಟೆಯ ಹೊರಗಿರುವ ಸ್ವಯಂಸೇವಾ ಸಂಸ್ಥೆಗಳು, ಸ್ವಸಹಾಯ ಸಂಘಟನೆಗಳು, ಮಾಧ್ಯಮ, ಸಂಶೋಧಕರು, ವೃತ್ತಿಪರ ಸಂಘಗಳು ಮತ್ತು ಜನತೆಯನ್ನು ಒಳಗೊಂಡ ಸಂಘಟಿತ ಗುಂಪುಗಳ ಸಮೂಹವಾಗಿದೆ. ಇಂದು ಸಮಾಜದಲ್ಲಿ ಸಾರ್ವಜನಿಕ ಹಿತಾಸಕ್ತಿಯನ್ನು ಪ್ರತಿನಿಧಿಸುವ ಮಹತ್ವದ ವಲಯವಾಗಿದೆ. ಸರಕಾರದ ನೀತಿ ವಿಮರ್ಶೆಯ ಮೂಲಕ ಪ್ರಜೆಗಳ ಹಕ್ಕುಗಳ ರಕ್ಷಕನಾಗಿಯೂ ಕಾರ್ಯನಿರ್ವಹಿಸುತ್ತಿದೆ.

**ನಾಗರಿಕ ಸಮಾಜದ ಮುಖ್ಯ ಕಾರ್ಯಗಳು ಕೆಳಕಂಡಂತಿವೆ,**

1. ಸರಕಾರದ ನೀತಿ ಮತ್ತು ಕಾರ್ಯಕ್ರಮಗಳ ವಿಮರ್ಶೆ
2. ಸಾರ್ವಜನಿಕ ಹಿತಾಸಕ್ತಿಯ ರಕ್ಷಣೆ
3. ನಾಗರಿಕ ಹಕ್ಕುಗಳು ಮತ್ತು ಸ್ವಾತಂತ್ರ್ಯದ ಪರಿರಕ್ಷಣೆ
4. ಜನಜಾಗೃತಿ ಮತ್ತು ಭಾಗವಹಿಸುವಿಕೆಯ ಉತ್ತೇಜನ
5. ಸಾರ್ವಜನಿಕ ಸೇವೆಗಳ ಹೊಣೆಗಾರಿಕೆ

ವಿದ್ಯುನ್ಮಾನ ಯುಗದಲ್ಲಿ ನಾಗರಿಕ ಸಮಾಜದ ಹೊಣೆಗಾರಿಕೆಯ ಪಾತ್ರ ಮತ್ತಷ್ಟು ವಿಸ್ತಾರಗೊಂಡಿದೆ. ವಿದ್ಯುನ್ಮಾನ ಆಡಳಿತದಲ್ಲಿ ಪ್ರಜೆಗಳ ಹಕ್ಕುಗಳಿಗೆ ಹೆಚ್ಚು ಅಪಾಯವಿರುವ ಸಾಧ್ಯತೆಯಿರುವುದರಿಂದ ನಾಗರಿಕ ಸಮಾಜದ ಜವಾಬ್ದಾರಿಯು ಹೆಚ್ಚಾಗಿದೆ. ತನ್ನ ಜಾಗೃತಿಯ ಅಭಿಯಾನಗಳನ್ನು ಕೈಗೊಳ್ಳಲು ನಾಗರಿಕ ಸಮಾಜವು ವಿದ್ಯುನ್ಮಾನ ಸೇವೆಗಳನ್ನೇ ಬಳಸಿಕೊಳ್ಳುತ್ತಿದೆ ಮತ್ತು ಸಾಮಾಜಿಕ ಮಾಧ್ಯಮ, ವಿದ್ಯುನ್ಮಾನ ವೇದಿಕೆಗಳು ಹಾಗೂ ಅಂತರ್ಜಾಲ ಅಭಿಯಾನಗಳ ಮೂಲಕ ನಾಗರಿಕ ಸಮಾಜವು ತನ್ನ ಧ್ವನಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ವ್ಯಕ್ತಪಡಿಸಬಲ್ಲ ಶಕ್ತಿಯಾಗಿ ಬೆಳೆದಿದೆ. ಇದರಿಂದ ಸರಕಾರದ ಮೇಲೆ ಜನರ ಪ್ರಭಾವ ಮತ್ತು ಒತ್ತಡ ಮತ್ತಷ್ಟು ಹೆಚ್ಚಾಗಿದೆ.

**ನಾಗರಿಕ ಸಮಾಜದ ಹೊಣೆಗಾರಿಕೆ:**

“ಹೊಣೆಗಾರಿಕೆ (ಜವಾಬ್ದಾರಿತ್ವ)” ಎಂಬ ಪದವು ಸರಕಾರ ಅಥವಾ ಶಕ್ತಿಶಾಲಿ ಸಂಸ್ಥೆಗಳ ಚಟುವಟಿಕೆಗಳ ಮೇಲೆ ನಿಗಾವಹಿಸಿ, ಅವುಗಳು ತಮ್ಮ ಅಧಿಕಾರವನ್ನು ದುರುಪಯೋಗ ಮಾಡದಂತೆ ತಡೆಯುವ ಸಂಸ್ಥೆ ಅಥವಾ ಗುಂಪುಗಳ ಸಹಭಾಗಿತ್ವದ ಕ್ರಿಯಾಶೀಲ ಕಾರ್ಯವನ್ನು ಸೂಚಿಸುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೊಣೆಗಾರಿಕೆ ಪಾತ್ರ ಅತ್ಯಂತ ಅಗತ್ಯವಾದದ್ದು. ವಿದ್ಯುನ್ಮಾನ ಆಡಳಿತದಲ್ಲಿ ಅಧಿಕಾರವು ತಂತ್ರಜ್ಞಾನ ಮತ್ತು ಮಾಹಿತಿ ರೂಪದಲ್ಲಿ ಕೇಂದ್ರೀಕೃತವಾಗುವ ಸಾಧ್ಯತೆ ಇದೆ. ಈ ಕೇಂದ್ರೀಕರಣವು ನಾಗರಿಕ ಹಕ್ಕುಗಳಿಗೆ ಅಪಾಯಕಾರಿಯಾಗಬಹುದು, ಆದ್ದರಿಂದ ನಾಗರಿಕ ಸಮಾಜವು ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಿ, ವಿದ್ಯುನ್ಮಾನ ನೀತಿಗಳು ಜನಪರವಾಗಿವೆಯೇ? ನ್ಯಾಯಸಮ್ಮತವಾಗಿವೆಯೇ? ಎಂಬುದನ್ನು ನಿರಂತರವಾಗಿ ಪರಿಶೀಲಿಸಬೇಕಾಗುತ್ತದೆ. ವಿದ್ಯುನ್ಮಾನ ಆಡಳಿತದಲ್ಲಿ ಆಗುವ ದೋಷಗಳು ಜನರಿಗೆ ತಕ್ಷಣ ಗೋಚರವಾಗದೇ ಇರಬಹುದು. ಅಲ್ಲಿ ನಾಗರಿಕ ಸಮಾಜವು ನಿರಂತರವಾಗಿ ಪರಿಶೀಲಿಸುತ್ತಿದ್ದರೆ ಜನರ ಹಕ್ಕುಗಳನ್ನು ಸುಲಭವಾಗಿ ರಕ್ಷಿಸಬಹುದು. ಇಂತಹ ಹೊಣೆಗಾರಿಕೆಯುಳ್ಳ ನಾಗರಿಕ ಸಮಾಜದ ಪಾತ್ರವು ಕೇವಲ ವಿರೋಧಿಸುವುದಕ್ಕೆ ಮಾತ್ರವಲ್ಲ; ಸರಕಾರದ ನೀತಿಗಳನ್ನು ಸುಧಾರಿಸಲು, ಪರ್ಯಾಯ ಸಲಹೆಗಳನ್ನು ನೀಡಲು ಮತ್ತು ಆಡಳಿತವನ್ನು ಹೆಚ್ಚು ಹೊಣೆಗಾರವನ್ನಾಗಿಸಲು ಸಹಕಾರಿಯಾಗುತ್ತದೆ. ವಿದ್ಯುನ್ಮಾನ ಆಡಳಿತದ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಂಡು ಆಧುನಿಕತೆಯ ಕಡೆಗೆ ಪ್ರಜಾಸಮೂಹ ಸಾಗಬಹುದು. ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದೆ ಪರಿಣಾಮಕಾರಿಯಾಗಿ, ಪಾರದರ್ಶಕವಾಗಿ, ಹೊಣೆಗಾರಿಕೆಯಿಂದ ನಾಗರಿಕ ಸಮಾಜವು ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು.

**ವಿದ್ಯುನ್ಮಾನ ಆಡಳಿತದಲ್ಲಿ ನಾಗರಿಕ ಸಮಾಜದ ಪಾತ್ರ:**

ವಿದ್ಯುನ್ಮಾನ ಆಡಳಿತದಲ್ಲಿ ನಾಗರಿಕ ಸಮಾಜವು ಕ್ರಿಯಾಶೀಲತೆಯಿಂದ ಮತ್ತು ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವುದು ಅವಶ್ಯಕ. ಆಡಳಿತದ ಸೇವೆಗಳು ಸುಲಭವಾಗಿ

ದೊರಕಿ ಜನರು ನೆಮ್ಮದಿಯಿಂದಿರಲು ನಾಗರಿಕ ಸಮಾಜವು ಕೆಳಗಿನ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ.

**1. ಪಾರದರ್ಶಕತೆಯ ಪೋಷಣೆ:**

ವಿದ್ಯುನ್ಮಾನ ವ್ಯವಸ್ಥೆಗಳು ದೊಡ್ಡ ಪ್ರಮಾಣದ ಮಾಹಿತಿಯನ್ನು ಸಂಗ್ರಹಿಸುವುದರಿಂದ, ಸರಕಾರದ ನಿರ್ಧಾರಗಳು ಹೇಗೆ ಮತ್ತು ಯಾವ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತಿವೆ ಎಂಬುದು ಸಾಮಾನ್ಯ ನಾಗರಿಕರಿಗೆ ಅಸ್ಪಷ್ಟವಾಗುವ ಸಾಧ್ಯತೆಯಿದೆ. ಈ ಅಸ್ಪಷ್ಟತೆಯೇ ಆಡಳಿತದಲ್ಲಿ ಅನುಮಾನ ಮತ್ತು ಅವಿಶ್ವಾಸಕ್ಕೆ ಕಾರಣವಾಗಬಹುದು. ನಾಗರಿಕ ಸಮಾಜ ಸಂಸ್ಥೆಗಳು ವಿದ್ಯುನ್ಮಾನ ದಾಖಲೆಗಳು, ನೀತಿ ದಾಖಲೆಗಳು ಮತ್ತು ಆಡಳಿತಾತ್ಮಕ ನಿರ್ಧಾರಗಳನ್ನು ವಿಶ್ಲೇಷಿಸಿ ಸಾರ್ವಜನಿಕರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಒದಗಿಸುತ್ತವೆ. ಇದರಿಂದ ಪಾರದರ್ಶಕತೆ ಹೆಚ್ಚುತ್ತದೆ ಮತ್ತು "ಹಕ್ಕಿನ ಮಾಹಿತಿಗೆ ಪ್ರವೇಶ" ಎಂಬ ಸಂವಿಧಾನಾತ್ಮಕ ಹಕ್ಕು ವಿದ್ಯುನ್ಮಾನ ರೂಪದಲ್ಲಿ ಇನ್ನಷ್ಟು ಬಲವಾಗುತ್ತದೆ. ಸಾರ್ವಜನಿಕರ ಅಹವಾಲುಗಳನ್ನು ವಿದ್ಯುನ್ಮಾನ ಮೂಲಕವೇ ಪರಿಹಾರ ಒದಗಿಸುವುದು, ಸರಕಾರ ಮತ್ತು ನಾಗರಿಕರ ನಡುವಿನ ಸಂವಾದ ಮತ್ತು ಸೇವೆಗಳ ಸ್ಥಿತಿಗತಿ ಪರಿಶೀಲನೆಗೆ ಸಿಗುವ ಅವಕಾಶಗಳು ಪಾರದರ್ಶಕತೆಯನ್ನು ಖಚಿತಗೊಳಿಸುತ್ತವೆ.

**2. ಸಮುದಾಯ ಭಾಗವಹಿಸುವಿಕೆಗೆ ಬೆಂಬಲ:**

ವಿದ್ಯುನ್ಮಾನ ಆಡಳಿತವು ಜನರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹೊಸ ಅವಕಾಶಗಳನ್ನು ನೀಡಿದೆ. ಆದರೆ ಈ ಅವಕಾಶಗಳು ಎಲ್ಲರಿಗೂ ಸಮಾನವಾಗಿ ತಲುಪುತ್ತಿವೆಯೇ ಎಂಬ ಪ್ರಶ್ನೆ ಮುಖ್ಯವಾಗಿದೆ. ನಾಗರಿಕ ಸಮಾಜ ಸಾರ್ವಜನಿಕ ಸಭೆಗಳು, ಅಂತರ್ಜಾಲ ಸಮಾಲೋಚನೆಗಳು, ವಿದ್ಯುನ್ಮಾನ ಅಭಿಯಾನಗಳು ಮತ್ತು ಸಮಿತಿಗಳ ಮೂಲಕ ಜನರ ಭಾಗವಹಿಸುವಿಕೆಯನ್ನು ಉತ್ತೇಜಿಸುತ್ತವೆ. ವಿದ್ಯುನ್ಮಾನ ಸರಕಾರದ ನೀತಿ ಮತ್ತು ಆಡಳಿತಾತ್ಮಕ ಪ್ರಕ್ರಿಯೆಗೆ ಜನರ ಧ್ವನಿಯನ್ನು ಸೇರಿಸುವ ಸೇತುವೆಯಾಗಿ ಕಾರ್ಯನಿರ್ವಹಿಸುತ್ತವೆ. ಸಾರ್ವಜನಿಕ ನೀತಿಗಳ ಬಗ್ಗೆ ಸಲಹೆ, ಅಭಿಪ್ರಾಯ ಸಂಗ್ರಹ, ಟೀಕೆ ಮತ್ತು ಚರ್ಚೆಗಳಿಗೆ ವೇದಿಕೆಯನ್ನು ಒದಗಿಸಿ ಜನರ ಪಾಲ್ಗೊಳ್ಳುವಿಕೆಯನ್ನು ಬಲಗೊಳಿಸುತ್ತವೆ.

**3. ಮಾಹಿತಿ ಹಕ್ಕುಗಳು ಮತ್ತು ಗೌಪ್ಯತೆ:**

ವಿದ್ಯುನ್ಮಾನ ಆಡಳಿತದಲ್ಲಿ ನಾಗರಿಕರ ವೈಯಕ್ತಿಕ ಮಾಹಿತಿಯ ಸಂಗ್ರಹ ಮತ್ತು ಸಂಸ್ಕರಣೆ ಅನಿವಾರ್ಯವಾಗಿದೆ. ಆದರೆ ಸಂಗ್ರಹಿಸಿದ ಮಾಹಿತಿಯ ದುರುಪಯೋಗವು ಗೌಪ್ಯತಾ ತತ್ವದ ಉಲ್ಲಂಘನೆಗೆ ಕಾರಣವಾಗಬಹುದು. ನಾಗರಿಕ ಸಮಾಜವು ಮಾಹಿತಿ ಸಂಗ್ರಹದ ಮಿತಿ, ಮಾಹಿತಿ ಬಳಕೆಯ ಪಾರದರ್ಶಕತೆ ಮತ್ತು ಮಾಹಿತಿ ರಕ್ಷಣೆ ಕಾಯ್ದೆಗಳ ಅಗತ್ಯದ ಬಗ್ಗೆ ಸರಕಾರದ ಮೇಲೆ ಒತ್ತಡ ತರುತ್ತದೆ. ಇದರಿಂದ ನಾಗರಿಕರ ವಿದ್ಯುನ್ಮಾನ ಹಕ್ಕುಗಳ ಬಗ್ಗೆ ಜಾಗೃತಿ ಮೂಡುತ್ತದೆ. ಮಾಹಿತಿ ಹಕ್ಕುಗಳು ನಾಗರಿಕರಿಗೆ ಸರಕಾರದ ನಿರ್ಧಾರಗಳು, ನೀತಿಗಳು, ವೆಚ್ಚಗಳು ಹಾಗೂ ಆಡಳಿತಾತ್ಮಕ ಪ್ರಕ್ರಿಯೆಗಳ ಬಗ್ಗೆ ತಿಳಿದುಕೊಳ್ಳುವ ಅಧಿಕಾರವನ್ನು ನೀಡುತ್ತವೆ. ವಿದ್ಯುನ್ಮಾನ ವೇದಿಕೆಗಳ ಮೂಲಕ ಮಾಹಿತಿ ಸುಲಭವಾಗಿ ಲಭ್ಯವಾಗುವುದರಿಂದ ಪಾರದರ್ಶಕತೆ ಹೆಚ್ಚಾಗುವುದರ ಜೊತೆಗೆ ನಾಗರಿಕರ ಪಾಲ್ಗೊಳ್ಳುವಿಕೆ ಬಲಗೊಳ್ಳುತ್ತದೆ. ವಿದ್ಯುನ್ಮಾನ ಆಡಳಿತದಲ್ಲಿ ಮಾಹಿತಿ ಹಕ್ಕು ಮತ್ತು ಗೌಪ್ಯತೆ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಮುಖ್ಯ.

**4. ಭ್ರಷ್ಟಾಚಾರ ನಿಯಂತ್ರಣ:**

ವಿದ್ಯುನ್ಮಾನ ಆಡಳಿತದ ಮೂಲಕ ಆಡಳಿತದಲ್ಲಾಗುವ ವಿಳಂಬತೆಯನ್ನು ತಡೆಗಟ್ಟಿ ಭ್ರಷ್ಟಾಚಾರವನ್ನು ನಿಯಂತ್ರಿಸಬಹುದು. ಸರಕಾರಿ ಕಛೇರಿಗಳಲ್ಲಿ ಸೇವೆಗಳನ್ನು ನೀಡುವ ಸಿಬ್ಬಂದಿವರ್ಗವು ವಿದ್ಯುನ್ಮಾನ ಆಡಳಿತದಿಂದಾಗಿ ಯಾವುದೇ ವಿಳಂಬತೆಗೆ ಅವಕಾಶವಿರದೆ, ಗುಣಮಟ್ಟದ ಸೇವೆ ಒದಗಿಸುವ ಖಾತ್ರಿಯನ್ನು ನೀಡುತ್ತದೆ. ನಾಗರಿಕ ಸಮಾಜವು ಹೊಣೆಗಾರಿಕೆಯಿಂದ ವರ್ತಿಸಿ, ಸರಕಾರದ ಎಲ್ಲಾ ಸೇವೆಗಳು ವಿದ್ಯುನ್ಮಾನೀಕರಣಗೊಳಿಸುವಂತೆ ಮಾಡಲು ಒತ್ತಾಯಿಸುವ ಮೂಲಕ ಆಡಳಿತದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಿಸಬಹುದು.

**ಭಾರತದಲ್ಲಿ ವಿದ್ಯುನ್ಮಾನ ಆಡಳಿತ ಮತ್ತು ಹೊಣೆಗಾರಿಕೆ ಪರಿಸ್ಥಿತಿ:**

ಭಾರತದಲ್ಲಿ ''ಡಿಜಿಟಲ್ ಇಂಡಿಯಾ'' ಯೋಜನೆಯ ಮೂಲಕ ಸಾರ್ವಜನಿಕ ಸೇವೆಗಳು ದೊಡ್ಡ ಪ್ರಮಾಣದಲ್ಲಿ ತಾಂತ್ರೀಕರಿಸಲ್ಪಟ್ಟಿವೆ. ವಿದ್ಯುನ್ಮಾನ ಆಡಳಿತ, ಆಧಾರ್, ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ, ಅಂತರ್ಜಾಲ ಸೇವೆಗಳು ಮುಂತಾದ ಉಪಕ್ರಮಗಳು ಆಡಳಿತವನ್ನು ತಂತ್ರಜ್ಞಾನಾಧಾರಿತವಾಗಿಸಿವೆ. ಇದರಿಂದ ಸೇವೆಗಳ ಸುಲಭ ಲಭ್ಯತೆ ಹೆಚ್ಚಿದರೂ, ಕೆಲ ಪ್ರಮುಖ ಪ್ರಶ್ನೆಗಳು ಉದ್ಭವಿಸಿವೆ. ಆಧಾರ್ ಸಂಬಂಧಿತ ಮಾಹಿತಿಯ ಸುರಕ್ಷತೆ ಮತ್ತು ಗೌಪ್ಯತೆಯ ಕುರಿತು ಗಂಭೀರ ಚರ್ಚೆಗಳು ನಡೆದಿವೆ. ಅದೇ ರೀತಿ, ಸಾಮಾಜಿಕ ಮಾಧ್ಯಮ ನಿಯಂತ್ರಣ ಮತ್ತು ಅಂತರ್ಜಾಲ ವಿಷಯಗಳ ಮೇಲಿನ ದೋಷವಿಮರ್ಶೆಗಳ ಕುರಿತ ವಿವಾದಗಳು ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತು ಪ್ರಶ್ನೆಗಳನ್ನು ಎತ್ತಿವೆ. ವಿದ್ಯುನ್ಮಾನ ಆಡಳಿತ ಯೋಜನೆಗಳಲ್ಲಿ ಸಮಾನ ಪ್ರವೇಶದ ಕೊರತೆ, ವಿದ್ಯುನ್ಮಾನ ಮೂಲಸೌಕರ್ಯದ ಅಸಮಾನತೆ ಮತ್ತು ಗ್ರಾಮೀಣ ಪ್ರದೇಶದ ಜನರ ಕಡಿಮೆ ಭಾಗವಹಿಸುವಿಕೆ ಇನ್ನೂ ಸವಾಲಾಗಿವೆ. ಈ ಎಲ್ಲಾ ವಿಚಾರಗಳನ್ನು ನಾಗರಿಕ ಸಮಾಜವು ಸಂಶೋಧನೆ ಮತ್ತು ಸಾರ್ವಜನಿಕ ಚರ್ಚೆಯ ಮೂಲಕ ಬೆಳಕಿಗೆ ತಂದಿದೆ.

**ಸವಾಲುಗಳು:**

ವಿದ್ಯುನ್ಮಾನ ಆಡಳಿತದಲ್ಲಿ ನಾಗರಿಕ ಸಮಾಜದ ಪಾತ್ರವು ತುಂಬಾ ಸವಾಲಿನದ್ದಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ತಾಂತ್ರಿಕ ಜ್ಞಾನದ ಅಸಮಾನತೆಯಿಂದಾಗಿ, ಸಮಾಜದ ವಿಭಿನ್ನ ವರ್ಗಗಳಲ್ಲಿ ತಂತ್ರಜ್ಞಾನದ ಮಾಹಿತಿಯ ಕೊರತೆಯಿಂದಾಗಿ, ವಿದ್ಯುನ್ಮಾನ ಆಡಳಿತದ ಮೇಲ್ವಿಚಾರಣೆಯಲ್ಲಿ, ಸಹಭಾಗಿತ್ವದಲ್ಲಿ ಸವಾಲುಗಳು ಎದುರಾಗುತ್ತಿವೆ. ನಾಗರಿಕ ಸಮಾಜವು ಹೊಣೆಗಾರತ್ವ ಪಾತ್ರವನ್ನು ನಿರ್ವಹಿಸುವಾಗ ಈ ಕೆಳಕಂಡ ಸವಾಲುಗಳು ಕಾಣುತ್ತವೆ.

**1. ಕಾರ್ಯಪ್ರವೃತ್ತಿಗಳಲ್ಲಿನ ಕಡಿಮೆ ಸಾಮರ್ಥ್ಯ**

ಅನೇಕ ನಾಗರಿಕ ಸಂಸ್ಥೆಗಳು ತಾಂತ್ರಿಕ ಜ್ಞಾನ, ಆರ್ಥಿಕ ಸಂಪನ್ಮೂಲ ಮತ್ತು ತರಬೇತಿಯ ಕೊರತೆಯಿಂದ ಪರಿಣಾಮಕಾರಿಯಾಗಿ ಹೊಣೆಗಾರಿಕೆಯ ಪಾತ್ರನಿರ್ವಹಿಸಲು ಅಸಮರ್ಥವಾಗಿವೆ. ತಂತ್ರಜ್ಞಾನವು ದಿನನಿತ್ಯವೂ ಹೊಸತನವನ್ನು ಪಡೆದುಕೊಳ್ಳುತ್ತಿದ್ದು ವಿದ್ಯುನ್ಮಾನ ತಂತ್ರಜ್ಞಾನಗಳ ವೇಗವಾದ ಬದಲಾವಣೆಗಳಿಗೆ ಹೊಂದಿಕೊಳ್ಳುವುದು ನಾಗರಿಕ ಸಮಾಜಕ್ಕೆ ಸವಾಲಾಗಿದೆ.

**2. ಕಾನೂನು ನಿರ್ಬಂಧಗಳು**

ಕೆಲವು ಸಂದರ್ಭಗಳಲ್ಲಿ ಸರಕಾರಗಳು ''ರಾಷ್ಟ್ರೀಯ ಭದ್ರತೆ'' ಅಥವಾ ''ಗೋಪನೀಯತೆ'' ಎಂಬ ಕಾರಣಗಳನ್ನು ಮುಂದಿಟ್ಟು ಮಾಹಿತಿಯನ್ನು ಸಾರ್ವಜನಿಕರಿಗೆ

ಅಥವಾ ನಾಗರಿಕ ಸಂಸ್ಥೆಗಳಿಗೆ ನೀಡಲು ಹಿಂಜರಿಯುತ್ತವೆ. ಇದರಿಂದ ನಾಗರಿಕ ಸಮಾಜದ ಹೊಣೆಗಾರಿಕೆ ಕಾರ್ಯಕ್ಷಮತೆ ಕುಂಠಿತವಾಗುತ್ತದೆ. ಅಲ್ಲದೆ ಪ್ರತಿಯೊಬ್ಬರೂ ಕಡ್ಡಾಯವಾಗಿ ತಮಗೆ ಬೇಕಾದ ಸರಕಾರಿ ಸೌಲಭ್ಯಗಳನ್ನು ಮತ್ತು ಸೇವೆಗಳನ್ನು ವಿದ್ಯುನ್ಮಾನ ಆಡಳಿತದ ಮೂಲಕವೇ ಪಡೆದುಕೊಳ್ಳಲು ಒತ್ತಾಯಿಸಲಾಗುತ್ತಿದೆ ಮತ್ತು ಇದಕ್ಕೆ ಕಾನೂನುಗಳ ಮೂಲಕ ಆದೇಶಗಳನ್ನು ಹೊರಡಿಸಲಾಗುತ್ತದೆ.

**3. ವಿದ್ಯುನ್ಮಾನ ವಿಭಜನೆ (Digital Divide)**

ವಿದ್ಯುನ್ಮಾನ ಅಸಮಾನತೆ ಎಂದರೆ, ಸಮಾಜದ ವಿವಿಧ ವರ್ಗಗಳ ನಡುವೆ ವಿದ್ಯುನ್ಮಾನ ತಂತ್ರಜ್ಞಾನಗಳ ಬಳಕೆ ಮತ್ತು ಸಾಮರ್ಥ್ಯಗಳಲ್ಲಿರುವ ಅಂತರ. ಗ್ರಾಮೀಣ ಪ್ರದೇಶಗಳು, ಹಿಂದುಳಿದ ವರ್ಗಗಳು ಮತ್ತು ಆರ್ಥಿಕವಾಗಿ ದುರ್ಬಲ ಸಮುದಾಯಗಳು ವಿದ್ಯುನ್ಮಾನ ಸೇವೆಗಳಿಗೆ ಸಮಾನ ಪ್ರವೇಶ ಹೊಂದಿಲ್ಲ. ಈ ರೀತಿಯಲ್ಲಿ ಭೌಗೋಳಿಕ, ಆರ್ಥಿಕ, ಲಿಂಗ ಮತ್ತು ಶೈಕ್ಷಣಿಕವಾಗಿ ವಿದ್ಯುನ್ಮಾನ ತಂತ್ರಜ್ಞಾನದ ಅಸಮಾನತೆಯನ್ನು ಕಾಣುತ್ತೇವೆ. ವಿದ್ಯುನ್ಮಾನ ವಿಭಜನೆಯಿಂದ ನಾಗರಿಕ ಸಮಾಜವು ಎಲ್ಲ ವರ್ಗಗಳ ಧ್ವನಿಯನ್ನು ಪ್ರತಿನಿಧಿಸಲು ಅಡಚಣೆಗಳನ್ನು ಎದುರಿಸುತ್ತಿದೆ.

**ಶಿಫಾರಸುಗಳು (Recommendations):**

ವಿದ್ಯುನ್ಮಾನ ಆಡಳಿತವು ಪಾರದರ್ಶಕತೆ, ವೇಗ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಸಾಮರ್ಥ್ಯ ಹೊಂದಿದ್ದರೂ, ಅದರ ಯಶಸ್ಸು ನಾಗರಿಕ ಸಮಾಜದ ಸಕ್ರಿಯ ಮೇಲ್ವಿಚಾರಣೆಯ ಮೇಲೆ ಅವಲಂಬಿತವಾಗಿದೆ. ವಿದ್ಯುನ್ಮಾನ ಆಡಳಿತದಲ್ಲಿ ನಾಗರಿಕ ಸಮಾಜವು ಪರಿಣಾಮಕಾರಿಯಾಗಿ ಹೊಣೆಗಾರಿಕೆಯ ಪಾತ್ರ ನಿರ್ವಹಿಸಲು ಕೆಳಕಂಡ ಶಿಫಾರಸುಗಳನ್ನು ನೀಡಲು ಪ್ರಯತ್ನಿಸಲಾಗಿದೆ,

**1. ಸಂಸ್ಥಾತ್ಮಕ ಶಕ್ತಿವರ್ಧನೆ (Institutional Capacity Building)–**

ನಾಗರಿಕ ಸಮಾಜ ಸಂಸ್ಥೆಗಳಿಗೆ ವಿದ್ಯುನ್ಮಾನ ತಂತ್ರಜ್ಞಾನ, ಮಾಹಿತಿ ವಿಶ್ಲೇಷಣೆ, ಸೈಬರ್ ಕಾನೂನುಗಳು ಮತ್ತು ನೀತಿ ಅಧ್ಯಯನಗಳ ಕುರಿತು ನಿರಂತರ ತರಬೇತಿ ನೀಡಬೇಕು. ಇದರಿಂದ ತಾಂತ್ರಿಕವಾಗಿ ಸಬಲಗೊಂಡು ವಿದ್ಯುನ್ಮಾನ ಆಡಳಿತದ ಕಾರ್ಯವೈಖರಿಯನ್ನು ಸಮರ್ಥವಾಗಿ ವಿಮರ್ಶಿಸಲು ಸಾಧ್ಯವಾಗುತ್ತದೆ.

**2. ನೀತಿ ರೂಪಿಸುವಲ್ಲಿ ನಾಗರಿಕ ಸಮಾಜದ ಪಾಲ್ಗೊಳ್ಳುವಿಕೆ–**

ವಿದ್ಯುನ್ಮಾನ ಆಡಳಿತ ಸಂಬಂಧಿತ ನೀತಿ ರೂಪಿಸುವ ಮತ್ತು ಕಾನೂನು ಪ್ರಕ್ರಿಯೆಗಳಲ್ಲಿ ನಾಗರಿಕ ಸಮಾಜದ ಪ್ರತಿನಿಧಿಗಳನ್ನು ಅಧಿಕೃತವಾಗಿ ಸೇರಿಸಬೇಕು. ಇಂದು ನೀತಿಗಳು ಕೇವಲ ತಾಂತ್ರಿಕ ಅಥವಾ ಆಡಳಿತಾತ್ಮಕವಾಗಿರದೆ, ಅಭಿವೃದ್ಧಿ ಮತ್ತು ಪ್ರಜೆಗಳ ಹಕ್ಕುಗಳಿಗೆ ಸಂವೇದನಾಶೀಲವಾಗಲು ಸಹಕಾರಿಯಾಗುತ್ತದೆ. ಸರಕಾರಗಳಿಗೆ ಪರ್ಯಾಯ ನೀತಿ ಮತ್ತು ಸುಧಾರಣೆಗಳ ಕುರಿತು ಸಲಹೆ ನೀಡಬೇಕು. ಕೇವಲ ಟೀಕೆ ಟಿಪ್ಪಣಿಗಳಿಗೆ ಸೀಮಿತವಾಗಿರದೆ, ನಾಗರಿಕ ಸಮಾಜವು ಕ್ರಿಯಾಶೀಲತೆಯಿಂದ ಆಡಳಿತದ ನೀತಿಗಳಲ್ಲಿ ಸಹಭಾಗಿಯಾಗುವುದರ ಮೂಲಕ ಜವಾಬ್ದಾರಿಯನ್ನು ಸೂಕ್ತವಾಗಿ ನಿರ್ವಹಿಸುವುದು.

**3. ಮಾಹಿತಿ ರಕ್ಷಣೆ ಮತ್ತು ಗೌಪ್ಯತೆಗಾಗಿ ದೃಢ ಕಾನೂನು ಚೌಕಟ್ಟು–**

ನಾಗರಿಕರ ವೈಯಕ್ತಿಕ ಮಾಹಿತಿಯ ರಕ್ಷಣೆಗೆ ಸ್ಪಷ್ಟ, ಸಮಗ್ರ ಮತ್ತು ಪರಿಣಾಮಕಾರಿ ಮಾಹಿತಿ ರಕ್ಷಣೆಯ ಕಾನೂನುಗಳನ್ನು ಜಾರಿಗೆ ತರಬೇಕು. ನಾಗರಿಕರ ವೈಯಕ್ತಿಕ ಮಾಹಿತಿಯ

ದುರ್ಬಳಕೆಯಾಗದಂತೆ ಬಲಿಷ್ಠ ದತ್ತಾಂಶ ಸಂರಕ್ಷಣಾ ಕಾನೂನುಗಳನ್ನು ಜಾರಿಗೆ ತರುವುದು ಮತ್ತು ಈ ಕಾನೂನುಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವಲ್ಲಿ ನಾಗರಿಕ ಸಮಾಜಕ್ಕೆ ಜವಾಬ್ದಾರಿಯ ಸ್ಥಾನವನ್ನು ನೀಡಬೇಕು. ಸೂಕ್ತ ಕಾನೂನು ರಚನೆ ಮೂಲಕ ಪ್ರಜೆಗಳಿಂದ ಪಡೆದ ಮಾಹಿತಿಗಳು, ದತ್ತಾಂಶಗಳು, ದಾಖಲೆಗಳನ್ನು ಗೌಪ್ಯವಾಗಿಡಲು ಸಹಾಯಕವಾಗುತ್ತದೆ.

**4. ವಿದ್ಯುನ್ಮಾನ ಸಾಕ್ಷರತೆ ಮತ್ತು ಜನಜಾಗೃತಿ–**

ವಿದ್ಯುನ್ಮಾನ ಆಡಳಿತದ ಪ್ರಯೋಜನಗಳು ಮತ್ತು ಅಪಾಯಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಜವಾಬ್ದಾರಿ ಅತ್ಯಂತ ಮುಖ್ಯವಾಗಿದೆ. ನಾಗರಿಕ ಸಮಾಜವು ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ವಿದ್ಯುನ್ಮಾನ ಸಾಕ್ಷರತೆ ಅಭಿಯಾನಗಳನ್ನು ಹಮ್ಮಿಕೊಳ್ಳಬೇಕು. ಸರಕಾರದ ವಿದ್ಯುನ್ಮಾನ ಸೇವೆಗಳನ್ನು ಬಳಸಿಕೊಳ್ಳಲು ಸರಳ, ಬಳಕೆದಾರ ಸ್ನೇಹಿ ಮತ್ತು ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಸೂಕ್ತ ಅವಕಾಶವನ್ನು ನೀಡುವ ಮೂಲಕ ಜನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಬಹುದಾಗಿದೆ.

**5. ವಿದ್ಯುನ್ಮಾನ ವಿಭಜನೆ ಕಡಿಮೆ ಮಾಡುವ ಕ್ರಮಗಳು–**

ವಿದ್ಯುನ್ಮಾನ ಮೂಲಸೌಕರ್ಯವನ್ನು ಸಮಾನವಾಗಿ ವಿಸ್ತರಿಸಿ, ಸರಕಾರದ ಅಧಿಕೃತ ಅಂತರ್ಜಾಲ ತಾಣಗಳಿಗೆ ಸುಲಭ ಪ್ರವೇಶ, ಕಡಿಮೆ ವೆಚ್ಚದ ಸಾಧನಗಳು ಮತ್ತು ಬಹುಭಾಷಾ ವಿದ್ಯುನ್ಮಾನ ಸೇವೆಗಳನ್ನು ಒದಗಿಸಬೇಕು. ನಾಗರಿಕ ಸಮಾಜವು ಈ ಪ್ರಕ್ರಿಯೆಯಲ್ಲಿ ಸಮಾನತೆ ಸಾಧಿಸುವತ್ತ ಪ್ರಯತ್ನಿಸಬೇಕು. ತಂತ್ರಜ್ಞಾನದಲ್ಲಿ ಹಿಂದುಳಿದ ವರ್ಗವನ್ನು ಗುರುತಿಸಿ ವಿದ್ಯುನ್ಮಾನ ಸೇವೆಗಳ ಕುರಿತು ತರಬೇತಿಯನ್ನು ನೀಡುವುದು ಮತ್ತು ಉಪಯೋಗಿಸಲು ಪ್ರೇರೆಪಿಸುವುದರಿಂದ ವಿದ್ಯುನ್ಮಾನ ಅಸಮಾನತೆ ಕಡಿಮೆಯಾಗಿ ಹೆಚ್ಚಿನ ಪ್ರಮಾಣದಲ್ಲಿ ಜನಸಾಮಾನ್ಯರಿಗೆ ಅನುಕೂಲವಾಗುವುದು.

**ಸಮಾರೋಪ:**

ವಿದ್ಯುನ್ಮಾನ ಆಡಳಿತವು ಆಡಳಿತ ವ್ಯವಸ್ಥೆಯನ್ನು ವೇಗವಾಗಿ, ಪರಿಣಾಮಕಾರಿಯಾಗಿ ಮತ್ತು ಸುಲಭವಾಗಿ ರೂಪಿಸುವ ಸಾಮರ್ಥ್ಯವನ್ನು ಹೊಂದಿದೆ. ಆದರೆ ಅದೇ ಸಮಯದಲ್ಲಿ ಮಾಹಿತಿ ಕೇಂದ್ರೀಕರಣ, ನಿಗಾವ್ಯವಸ್ಥೆ ಮತ್ತು ತಾಂತ್ರಿಕ ನಿಯಂತ್ರಣದ ಮೂಲಕ ನಾಗರಿಕ ಹಕ್ಕುಗಳಿಗೆ ಸವಾಲುಗಳನ್ನು ಸೃಷ್ಟಿಸುವ ಸಾಧ್ಯತೆಯೂ ಇದೆ. ಈ ಎರಡೂ ಆಯಾಮಗಳ ನಡುವಿನ ಸಮತೋಲನವನ್ನು ಸಾಧಿಸುವಲ್ಲಿ ನಾಗರಿಕ ಸಮಾಜದ ಹೊಣೆಗಾರಿಕೆ ಪಾತ್ರ ಅತ್ಯಂತ ಮಹತ್ವದಾಗಿದೆ. ನಾಗರಿಕ ಸಮಾಜವು ಪಾರದರ್ಶಕತೆ, ಜವಾಬ್ದಾರಿ ಮತ್ತು ಸಾರ್ವಜನಿಕ ಹಿತಾಸಕ್ತಿಯ ಸಂರಕ್ಷಣೆಯಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ವಿದ್ಯುನ್ಮಾನ ಆಡಳಿತವು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಅನುಗುಣವಾಗಿ ಬೆಳೆಯಲು ಸಾಧ್ಯ. ಹೊಣೆಗಾರಿಕೆ ಪಾತ್ರವನ್ನು ಕೇವಲ ವಿರೋಧ ಅಥವಾ ಟೀಕೆಯ ರೂಪದಲ್ಲಿ ನೋಡದೆ, ಆಡಳಿತ ಸುಧಾರಣೆಗೆ ಅಗತ್ಯವಾದ ನಿರ್ಮಾಣಾತ್ಮಕ ಸಹಭಾಗಿತ್ವವೆಂದು ಅರ್ಥೈಸಬೇಕು.

ಅಂತಿಮವಾಗಿ, ವಿದ್ಯುನ್ಮಾನ ಆಡಳಿತ ಮತ್ತು ನಾಗರಿಕ ಸಮಾಜದ ನಡುವಿನ ಸಮನ್ವಯವು ಶಕ್ತಿಶಾಲಿಯಾಗಿದ್ದರೆ, ಆಡಳಿತವು ಕೇವಲ ತಂತ್ರಜ್ಞಾನ ಚಾಲಿತವಾಗದೇ, ಮಾನವ ಕೇಂದ್ರಿತ, ನ್ಯಾಯಸಮ್ಮತ ಮತ್ತು ಸಹಭಾಗಿತ್ವ ಪ್ರಜಾಪ್ರಭುತ್ವ ವ್ಯವಸ್ಥೆಯಾಗಿ ರೂಪುಗೊಳ್ಳುತ್ತದೆ. ಇಂದು ಆಧುನಿಕ ರಾಜ್ಯದ ಸ್ಥಿರತೆ ಮತ್ತು ನಾಗರಿಕರ ವಿಶ್ವಾಸಕ್ಕೆ ಮೂಲಭೂತ ಆಧಾರವಾಗುತ್ತದೆ. ಭ್ರಷ್ಟಾಚಾರ ರಹಿತ, ಪಾರದರ್ಶಕ, ಕ್ಷಿಪ್ರಗತಿಯಲ್ಲಿ ಸರಕಾರದ ಸೇವೆ ಮತ್ತು ಯೋಜನೆಗಳು ಪ್ರತಿಯೊಬ್ಬ ಪ್ರಜೆಗೆ ದೊರಕಿ ರಾಷ್ಟ್ರದ ಅಭಿವೃದ್ಧಿಗೆ

ನೆರವಾಗುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಅಪ್ಪಾದುರೈ, ಎ.(2012). ರಾಜ್ಯ ಮತ್ತು ಆಡಳಿತದ ಸಿದ್ಧಾಂತಗಳು. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು
2. ಚಂದ್ರಶೇಖರ್, ಕೆ.ಎಸ್.(2015) ಸಾರ್ವಜನಿಕ ಆಡಳಿತ:ಸಿದ್ಧಾಂತ ಮತ್ತು ಅಭ್ಯಾಸ. ಮೈಸೂರು ವಿಶ್ವವಿದ್ಯಾಲಯ ಪ್ರಕಾಶನ. ಮೈಸೂರು
3. ನಾಗರಾಜ, ಎಸ್. ಎಂ.(2018). ಭಾರತೀಯ ಆಡಳಿತ ವ್ಯವಸ್ಥೆ. ಬೆಂಗಳೂರು: ಸಪ್ನ ಬುಕ್ ಹೌಸ್.
4. ರಾಜೇಂದ್ರ ಪ್ರಸಾದ್, ಎನ್.(2014). ಪ್ರಜಾಪ್ರಭುತ್ವ ಮತ್ತು ನಾಗರಿಕ ಸಮಾಜ. ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
5. ಶಿವಾನಂದಯ್ಯ, ಬಿ. ಎಂ.(2016). ಮಾನವ ಹಕ್ಕುಗಳು ಮತ್ತು ಆಡಳಿತ. ಮಂಗಳೂರು: ಮಂಗಳ ಪ್ರಕಾಶನ.
6. ರಾಮಚಂದ್ರಗೌಡ, ಎಚ್. ಎನ್.(2019). ಭಾರತದಲ್ಲಿ ಇ–ಆಡಳಿತ. ಬೆಂಗಳೂರು: ಅಂಕಿತ ಪ್ರಕಾಶನ.
7. ವೆಂಕಟೇಶ್, ಆರ್.(2017). ಮಾಹಿತಿ ತಂತ್ರಜ್ಞಾನ ಮತ್ತು ಆಡಳಿತ. ತುಮಕೂರು: ಶ್ರೀ ಸಿದ್ಧಾರ್ಥ ಪ್ರಕಾಶನ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.